**ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.**
**ದಿನಾಂಕಃ 17-07-2018.**

*ಪಾಟೀ ಸವಾಲು ಶ್ರೀ ಎಸ್.ಆರ್.ಎಸ್. ವಕೀಲರಿಂದಃ*

ವಾದಿ ಮತ್ತು ಪ್ರತಿವಾದಿ ಕೆ.ಆರ್ ಪೇಟೆ ತಾಲ್ಲೂಕು, ಲೋಕನಹಳ್ಳಿ ಗ್ರಾಮದವರು. ಪ್ರತಿವಾದಿ ಬ್ಯಾಂಕ್ ನೌಕರಿಯಲ್ಲಿದ್ದ, ನಿವೃತ್ತಿಯಾದ ನಂತರ ಚನ್ನರಾಯಪಟ್ಟಣದಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. ನಾನು ಸುಮಾರು 30 ವರ್ಷಗಳಿಂದ ಮೈಸೂರಿನಲ್ಲಿ ವಾಸವಾಗಿದ್ದೇನೆ. ನಾನು ಲೋಕನಹಳ್ಳಿಗೆ ಹೋಗಿ ಬಂದು ಮಾಡುತ್ತೇನೆ. ವಾದಿ ಮತ್ತು ಪ್ರತಿವಾದಿ ನನ್ನ ಖಾಸಾ ಸಹೋದರರು. ಮತ್ತೊಬ್ಬ ಸಹೋದರ ಕೃಷ್ಣೇಗೌಡ ಲೋಕನಹಳ್ಳಿಯಲ್ಲಿ ವಾಸವಾಗಿದ್ದಾರೆ. ನಮ್ಮ ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದೇವೆ. ನಮ್ಮ ನಮ್ಮ ಭಾಗದ ಸ್ವತ್ತುಗಳನು ಪ್ರತ್ಯೇಕವಾಗಿ ಅನುಭವಿಸುತ್ತಿದ್ದೇವೆ ಎಂದರೆ ಸರಿ.

ಸದರಿ ವಿಭಾಗವನ್ನು ದಿನಾಂಕಃ26.05.1993 ರಲ್ಲಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಸದರಿ ಪಾರಿಕತ್ತಿನಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸರಿ ಇರುತ್ತವೆ. ಸದರಿ ಪಾರಿಕತ್ತಿನಲ್ಲಿ ವಾದಿ ಕ್ರಯಕ್ಕೆ ಪಡೆದಿರುವ ಸ್ವತ್ತುಗಳನ್ನು ಸಹ ಸೇರಿಸಿ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ. ಸದರಿ ಪಾರಿಕತ್ತಿನಲ್ಲಿ ವಾದಿ ಕ್ರಯಕ್ಕೆ ಪಡೆದಿರುವ ಸ್ವತ್ತು, ಪ್ರತಿವಾದಿಯ ಹೆಂಡತಿ ರತ್ನಮ್ಮ ಕೊಂಡುಕೊಂಡಿರುವ ಸ್ವತ್ತು ಬಿದಿರೆ ಹಳ್ಳಿಯ ಸರ್ವೆ ನಂಬರ್ ಗಳ ಸ್ವತ್ತುಗಳು ಪ್ರತಿವಾದಿಯ ಭಾಗಕ್ಕೆ ಬಂದಿದೆ ಎಂದರೆ ಸರಿ. ನನ್ನ ಭಾಗಕ್ಕೆ ಬಂದ ಸ್ವತ್ತುಗಳನ್ನು ನಾನು ಉಳಿಸಿಕೊಂಡಿದ್ದೇನೆ. ಚನ್ನರಾಯಪಟ್ಟಣ ಗಾಂಧಿ ಸರ್ಕಲ್‌ನಲ್ಲಿರುವ ನಿವೇಶನ ಪ್ರತಿವಾದಿಯ ಭಾಗಕ್ಕೆ ಪಾಲುಪಾರಿಕತ್ತಿನಲ್ಲಿ ಬಂದಿದೆ ಎಂದರೆ ಸಾಕ್ಷಿಯು ವಾದಿ ಕ್ರಯಕ್ಕೆ ಪಡೆದಿರುವ ಸ್ವತ್ತು ಎಂದು ನುಡಿಯುತ್ತಾರೆ.

ದಾವಾ ಸ್ವತ್ತು ಯಾರ ಹೆಸರಿನಲ್ಲಿ ಖಾತೆ ಇದೆ ಎಂದು ಗೊತ್ತಿಲ್ಲ. ದಾವಾ ಸ್ವತ್ತನ್ನು ಪಾಲುಪಾಕತ್ತಿನ ಪ್ರಕಾರ ಪ್ರತಿವಾದಿ ಖಾತೆ ಮಾಡಿಸಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ಖಾತೆ ಮಾಡಿಸಿಕೊಂಡಿದ್ದಾರೆ ಆದರೆ ವಾದಿ ಸ್ವಾಧೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ. ವಾದಿ ಕೆ.ಆರ್ ಪೇಟೆ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 170/2015 ನ್ನು ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ.

ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದರೂ ಕೂಡ ಪ್ರತಿವಾದಿ ಆಸ್ತಿಗಳನ್ನು ಹೊಡೆದುಕೊಳ್ಳುವ ಸಲುವಾಗಿ ವಾದಿಯ ಜೊತೆ ಶಾರೀಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.ಸ.ಮಾ,**

***(ಎಸ್.ಚಿನ್ನಸ್ವಾಮಿ)***
**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಚನ್ನರಾಯಪಟ್ಟಣ**